# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1042 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ .ಕೆ (ನಾಮನಿರ್ದೇಶಿತರು) |
| 3. | ಉತ್ತರಿಸಬೇಕಾದ ದಿನಾಂಕ | : | 16.12.2025 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 2025-26ನೇ ಸಾಲಿನ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಕಾಯ್ದಿಟ್ಟ 30 ಕೋಟಿಗಳು ಆಯಾ ಸಕ್ಕರೆ ಕಾರ್ಖಾನೆಗಳಲ್ಲಿ ಮಾತ್ರ ಕಬ್ಬು ಲಾರಿಗಳ ಡಿಜಿಟಲ್ ತೂಕದ ಯಂತ್ರಗಳನ್ನು ಅಳವಡಿಸುವುದು, ಅದರ ಕೀ ಯನ್ನು APMC ಗಳ ಮೂಲಕ ನಿರ್ವಹಣೆ ಮಾಡಲಾಗಿದೆಯೇ; | 2024-25ನೇ ಸಾಲಿನ ಆಯವ್ಯಯ ಘೋಷಣೆ ಖಂಡಿಕೆ:71 ರಲ್ಲಿ "ರಾಜ್ಯದಲ್ಲಿ ಕಬ್ಬು ಬೆಳೆಗಾರರ ಹಿತ ಕಾಯಲು ಮತ್ತು ತೂಕದಲ್ಲಾಗುವ ಮೋಸ ತಡೆಗಟ್ಟಲು ಎಲ್ಲಾ ಸಕ್ಕರೆ ಕಾರ್ಖಾನೆಗಳ ಬಳಿ ವೇಬ್ರಿಡ್ಜ್‌ಗಳನ್ನು ಎ.ಪಿ.ಎಂ.ಸಿ.ಗಳ ಮೂಲಕ ಸ್ಥಾಪಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಸಿಐ 145 ಎಂಆರ್‌ಇ 2024 ದಿನಾಂಕ:10.12.2024 ರನ್ವಯ ಸಕ್ಕರೆ ಕಾರ್ಖಾನೆಗಳ ಬಳಿ ವೇ-ಬ್ರಿಡ್ಜ್‌ಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ಸ್ಥಾಪಿಸಲು ಪ್ರಥಮ ಹಂತದಲ್ಲಿ 13 ಎ.ಪಿ.ಎಂ.ಸಿ ಗಳಲ್ಲಿ ಗುರುತಿಸಲಾದ 15 ಸ್ಥಳಗಳಲ್ಲಿ ಮತ್ತು ಡಿಜಿಟಲ್ ಮತ್ತು ಟ್ಯಾಂಪರಿಂಗ್ ಪ್ರೂಫ್ ವೇ-ಬ್ರಿಡ್ಜ್‌ಗಳನ್ನು ಸ್ಥಾಪಿಸಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ, ಬೆಳಗಾವಿ-ಹಿರೇಬಾಗೇವಾಡಿಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮುಧೋಳ ಮತ್ತು ಬೈಲಹೊಂಗಲ-ನೇಸರಗಿ ಸ್ಥಳಗಳಿಗೆ ಟೆಂಡರ್ ಅನುಮೋದನೆಯಾಗಿದ್ದು ಉಳಿದ ಐದು ಸ್ಥಳಗಳಾದ ಬಾದಾಮಿ-ಕೆರೂರು, ಮಹಾಲಿಂಗಪುರ, ಯರಗಟ್ಟಿ, ಮದ್ದೂರು-ಗುಡಿಗೆರೆ ಮತ್ತು ಕೊಳ್ಳೇಗಾಲ – ಚಿಲಕವಾಡಿಯಲ್ಲಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಇನ್ನುಳಿದ ಮೂರು ಸ್ಥಳಗಳಾದ 1) ಆಲಮೇಲ 2) ವಿಜಯಪುರ -ಕೊಲ್ಹಾರ 3) ಬೈಲಹೊಂಗಲ – ಎಂ.ಕೆ ಹುಬ್ಬಳ್ಳಿ ಸ್ಥಳಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| (ಆ) | ಕಬ್ಬು ಸಾಗಾಣಿಕೆಯನ್ನು ಪ್ರತಿ ಕಿಲೋ ಮೀಟರ್ ದಂತೆ ಸಾಗಾಣಿಕೆ ಮತ್ತು ಕಬ್ಬು ನಿರ್ವಹಣೆ (H&T) ಸರ್ಕಾರದ ಆದೇಶದ ಮಾನದಂಡನೆಗಳನ್ನು ಕಡ್ಡಾಯ ಪಾಲನೆ ಮಾಡಲಾಗಿದೆಯೆ; | ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಅನ್ವಯವಾಗುವಂತೆ 2025-26ನೇ ಸಾಲಿಗೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚಗಳನ್ನು ಪರಿಷ್ಕರಿಸುವ ಕುರಿತಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ದಿನಾಂಕ:21.04.2025 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜರುಗಿದ ಕಬ್ಬು ಮತ್ತು ಸಕ್ಕರೆ ತಜ್ಞರ ಸಮಿತಿ ಸಭೆಗೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ವರದಿಯನ್ನು, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತುಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:10.06.2025 ರಂದು ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚಗಳ ಕುರಿತ ಪರಿಷ್ಕೃತ ಮಾರ್ಗಸೂಚಿಗಳನ್ನು ಸರ್ವಾನುಮತದಿಂದ ಅನುಮೋದಿಸಲಾಗಿರುತ್ತದೆ. ಅದರಂತೆ, 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಿಂದ ಅನ್ವಯವಾಗುವಂತೆ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ದರ ಹಾಗೂ ಮಾರ್ಗಸೂಚಿಗಳ ಕುರಿತು ದಿನಾಂಕ:26.08.2025 ರಂದು ಆದೇಶವನ್ನು ಹೊರಡಿಸಲಾಗಿದ್ದು, ಸದರಿ ಆದೇಶವನ್ನು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚಿಸಲಾಗಿರುತ್ತದೆ. ಅದರಂತೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುತ್ತಿವೆ. |

| | | |
|---|---|---|
| (ಇ) | ಆರ್ಥಿಕ ತಜ್ಞ ಸಿ, ರಂಗರಾಜನ್ ವರದಿಯಂತೆ, ಸಕ್ಕರೆ ನಂತರ, ಉತ್ಪಾದನೆ ಹಾಗೂ ಉಪ ಉತ್ಪನ್ನಗಳಾದ 1, ಮೋಲಾಸಿಸ್, ಕೋಜನ್, ಬಗ್ಯಾಸ್, ಸಿಪ್ಪೆ, ವಿದ್ಯುತ್, ಎಥೆನಾಲ್ ದಂತಹ ಬಂದ ಆದಾಯದಲ್ಲಿ %70-30 ಅನುಪಾತದಲ್ಲಿ ಆದಾಯ ಹಂಚಿಕೆ ಸೂತ್ರ ಅಳವಡಿಸಲಾಗಿದೆಯೇ; (Revenue Sharing Formula). | ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 4ಡಿ ಅನ್ವಯ, ವರ್ಷದಲ್ಲಿ ಅರೆದ ಕಬ್ಬಿನಿಂದ ಪ್ರಾಪ್ತವಾದ ಆದಾಯವು, ಸಕ್ಕರೆಯ ವಾಸ್ತವ ಉತ್ಪಾದನೆ ಮತ್ತು ಅದರ ಉಪ ಉತ್ಪತ್ತಿಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್‌ಮಡ್ ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ ಯಾವುದಾದರೂ ಇದ್ದಲ್ಲಿ ಅವುಗಳನ್ನು ಮಾರಾಟ ಮಾಡಿರದಿದ್ದಾಗ್ಯೂ, ಮಾರಾಟಗಳು ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನನ್ನು ಪರಿಗಣಿಸಿ ಸುಪ್ತವಾಗಿ ಮೌಲ್ಯ ಮಾಡಿ ಆದಾಯ ಪ್ರಾಪ್ತಿಯ ಮೇಲೆ ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸಲು ಅವಕಾಶ ಇರುತ್ತದೆ. ಸದರಿ ಆದಾಯದಲ್ಲಿ 70-30 % ಅನುಪಾತದಲ್ಲಿ ರೈತರು ಮತ್ತು ಕಾರ್ಖಾನೆಗಳಿಗೆ ಆದಾಯ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| (ಈ) | ಕರ್ನಾಟಕ ಕಬ್ಬು (ಸರಬರಾಜು ಮತ್ತು ನಿಯಂತ್ರಣ) ಅಧಿನಿಯಮ 2013-14 ರಲ್ಲಿದ್ದಂತೆ ನಿಯಮಗಳು ಜಾರಿಯಾಗಿದೆಯೆ; (ಅಪರಾಧ ಶಿಕ್ಷಾರ್ಹ ಮತ್ತು ಜುಲ್ಮಾನೆ) | ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013ರ ಕಲಂ 10 ರಲ್ಲಿ "ಯಾರೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿರುವ ಯಾವುದೇ ನಿಯಮಗಳ ಯಾವುದೇ ಉಪನಿಬಂಧನೆಗಳನ್ನು ಉಲ್ಲಂಘಿಸಿದರೆ, ಅತನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡನೀಯನಾಗತಕ್ಕದ್ದು" ಎಂದು ಉಪಬಂಧಿಸಲಾಗಿರುತ್ತದೆ. ಸದರಿ ಕಲಂ 10 ರಲ್ಲಿನ ಶಿಕ್ಷೆ ಮತ್ತು ಜುಲ್ಮಾನೆಯ ಕುರಿತು ದೂರನ್ನು ನೀಡಲು , ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿರುವ ಯಾವುದೇ ನಿಯಮಗಳ ಅಪರಾಧಗಳ ಸಂಬಂಧದಲ್ಲಿ ರಾಜಿ ಮಾಡಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಅಧಿಕಾರ ಪ್ರದತ್ತವಾಗಿರುತ್ತದೆ. |
| (ಉ) | ಸರ್ಕಾರ ಪ್ರತಿ ರೈತರಿಗೂ ~~ಸರಗಕಾರೆ~~ ರೂ.50/- ಸಂದಾಯವಾಗಬೇಕು ಮತ್ತು ಸರ್ಕಾರದ ಆದೇಶ ಅವೈಜ್ಞಾನಿಕವಾಗಿದೆ. "ಏಕರೂಪ ದರ ನಿಗದಿ ಪಡಿಸುವ ಬಗ್ಗೆ, ಚಿಂತನೆ ನಡೆದಿದೆಯೆ? | ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯು ನ್ಯಾಯಯುತವಾಗಿ ಇಲ್ಲದೇ ಇರುವ ಕಾರಣ ರೈತರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದು ಮತ್ತು ಉತ್ಪಾದನೆಗೆ ಆಗುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದೇ ಇಳುವರಿ (Recovery) ಆಧಾರದ ಮೇಲೆ ಬೆಲೆ ನಿರ್ಧಾರವಾಗುತ್ತಿರುವುದರಿಂದ ಇಳುವರಿ ವರದಿಯು ಕೂಡ ಪಾರದರ್ಶಕವಾಗಿಲ್ಲವೆಂದು, ರೈತರಿಗೆ ಕಬ್ಬಿನ ದರದಲ್ಲಿ ವ್ಯತ್ಯಾಸವಾಗುತ್ತಿದ್ದು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಎಫ್‌ಆರ್‌ಪಿ ದರವನ್ನು ಒಪ್ಪಲು ಸಾಧ್ಯವಿಲ್ಲವೆಂದು, ಈ ಹಿನ್ನೆಲೆಯಲ್ಲಿ ಪ್ರಸಕ್ತ 2025-26 ನೇ ಹಂಗಾಮಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3500/- ಗಳನ್ನು (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಹೊರತುಪಡಿಸಿ) ನಿಗಧಿಪಡಿಸುವಂತೆ ರಾಜ್ಯ ರೈತ ಸಂಘಟನೆಗಳು ಮತ್ತು ರೈತ ಮುಖಂಡರು ಸರ್ಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಿದ್ದರು.<br>ಈ ಹಿನ್ನೆಲೆಯಲ್ಲಿ, ದಿನಾಂಕ:07.11.2025ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲೀಕರು / ಪ್ರತಿನಿಧಿಗಳೊಂದಿಗೆ ಮತ್ತು ರಾಜ್ಯದ ಕಬ್ಬು ಬೆಳೆಗಾರರು ಹಾಗೂ ರೈತ ಸಂಘಟನೆಗಳ ಮುಖಂಡರು ಮತ್ತು ಪ್ರತಿನಿಧಿಗಳೊಂದಿಗೆ ಸುಧೀರ್ಘವಾಗಿ |

ಸಭೆಯನ್ನು ಜರುಗಿಸಲಾಗಿರುತ್ತದೆ. ಸದರಿ ಸಭೆಯಲ್ಲಿ, ರಾಜ್ಯದ ಉತ್ತರ ಭಾಗದ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿರುವುದರಿಂದ ರೈತರು ಕಬ್ಬಿಗೆ ಹೆಚ್ಚಿನ ಬೆಲೆಯನ್ನು ನಿಗದಿಪಡಿಸುವಂತೆ ಒತ್ತಾಯಿಸಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್‌ನಲ್ಲಿ ನಡೆಸುತ್ತಿರುವ ಪ್ರತಿಭಟನೆಯ ಕುರಿತು ಹಾಗೂ ಬೆಳಗಾವಿ ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮತ್ತು ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರು ನಡೆಸಿರುವ ಸಭೆಗಳ ಕುರಿತು ಹಾಗೂ ಪ್ರತಿಭಟನಾ ಸ್ಥಳದಲ್ಲಿ ರೈತ ಪ್ರತಿನಿಧಿಗಳೊಂದಿಗೆ ನಡೆಸಿದ ಸಂಧಾನ ಸಭೆಗಳ ಕುರಿತು ಚರ್ಚಿಸಲಾಯಿತು. ರೈತರ ಪ್ರತಿಭಟನೆಗಳು ಬಾಗಲಕೋಟೆ, ವಿಜಯಪುರ ಕಲಬುರಗಿ, ಹಾವೇರಿ ಮತ್ತು ಇತರೆ ಜಿಲ್ಲೆಗಳಲ್ಲಿಯೂ ತೀವ್ರ ಸ್ವರೂಪ ಪಡೆದುಕೊಂಡಿರುವ ಕುರಿತು ಜಿಲ್ಲಾಧಿಕಾರಿಗಳು ವೀಡಿಯೋ ಕಾನ್ಫರೆನ್ಸ್ ಮೂಲಕ ಸಭೆಯ ಗಮನಕ್ಕೆ ತಂದಿರುತ್ತಾರೆ. ಕೇಂದ್ರ ಸರ್ಕಾರವು ರೈತರ ಕಬ್ಬಿಗೆ ನಿಗದಿಪಡಿಸಿರುವ ಎಫ್.ಆರ್.ಪಿ.ಯು ರೈತರಿಗೆ ಒಪ್ಪಿಗೆಯಾಗದೇ ಇರುವುದರಿಂದ ಮತ್ತು ಅನೇಕ ಕಾರ್ಖಾನೆಗಳು ರೈತರೊಂದಿಗೆ ಸಹಕಾರ ಮನೋಭಾವದೊಂದಿಗೆ ವ್ಯವಹರಿಸುವ ಉದ್ದೇಶದಿಂದ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ ಗಿಂತ ಹೆಚ್ಚಿನ ದರವನ್ನು ಹಿಂದಿನ ವರ್ಷಗಳಲ್ಲಿ ನೀಡಿರುವುದನ್ನು ಪರಿಗಣಿಸಿ, ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ 2025-26ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ಇಳುವರಿ ಆಧಾರದ ಮೇಲೆ ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ನೀಡಲು ಸಭೆಯು ತೀರ್ಮಾನಿಸಿರುತ್ತದೆ.

**<u>ರೈತರ ಪ್ರಮುಖ ಬೇಡಿಕೆಗಳು:</u>**

1. ಪ್ರಸಕ್ತ 2025-26 ನೇ ಸಾಲಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3500/ ಗಳ ದರವನ್ನು ನಿಗದಿಪಡಿಸುವುದು (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಹೊರತುಪಡಿಸಿ)
2. ಸಕ್ಕರೆ ಕಾರ್ಖಾನೆಗಳು ಕಬ್ಬಿನ ತೂಕ ಮತ್ತು ಸಕ್ಕರೆ ಇಳುವರಿಯಲ್ಲಿ ರೈತರಿಗೆ ಮೋಸ ಮಾಡುತ್ತಿದ್ದು ಇದನ್ನು ತಡೆಯಲು ಕ್ರಮ ಕೈಗೊಳ್ಳುವುದು.
3. ಸಕ್ಕರೆ ಇಳುವರಿಯನ್ನು ಪರಿಶೀಲಿಸಲು ಸಕ್ಕರೆ ಕಾರ್ಖಾನೆಗಳ ಮುಂದೆ ಸರ್ಕಾರವೇ ಪ್ರಯೋಗಾಲಯಗಳನ್ನು ಸ್ಥಾಪನೆ ಮಾಡುವುದು.
4. ಕೆಲವೊಂದು ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಲು ಕಬ್ಬಿನ ಬಿಲ್ಲು ಬಾಕಿ ಉಳಿಸಿಕೊಂಡಿದ್ದು ಈ ಬಾಕಿಗಳನ್ನು ಪಾವತಿಸುವುದು.

**<u>ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳು:</u>**

1. ಕೇಂದ್ರ ಸರ್ಕಾರವು ಸಕ್ಕರೆಗೆ ಕನಿಷ್ಟ ಮಾರಾಟ ಬೆಲೆಯನ್ನು ಪ್ರತಿ ಕೆ.ಜಿ. ಗೆ ರೂ.31/- ಗಳನ್ನು 2019 ರಲ್ಲಿ ನಿಗಧಿಪಡಿಸಿದ್ದು, ಕಳೆದ 06 ವರ್ಷಗಳಿಂದ ಸಕ್ಕರೆ ದರವನ್ನು ಹೆಚ್ಚಿಸಿರುವುದಿಲ್ಲ. ಆದರೆ ಕಬ್ಬಿನ ಬೆಲೆ ಎಫ್‌ಆರ್‌ಪಿ ಯನ್ನು ಪ್ರತಿ ವರ್ಷ ಹೆಚ್ಚಿಸುತ್ತಾ ಬಂದಿರುತ್ತದೆ. ಇದರಿಂದಾಗಿ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕವಾಗಿ ತೊಂದರೆಯಾಗಿರುತ್ತದೆ. ಆದ್ದರಿಂದ ಸಕ್ಕರೆಯ ಕನಿಷ್ಟ ಮಾರಾಟ ಬೆಲೆಯನ್ನು ಹೆಚ್ಚಿಸುವುದು.
2. ಕೇಂದ್ರ ಸರ್ಕಾರವು ಸಕ್ಕರೆ ರಫ್ತು ಮಾಡಲು ಅವಕಾಶ ನೀಡುವುದು.

3. ರಾಜ್ಯದ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ಎಥನಾಲ್ ದರವನ್ನು ಪರಿಷ್ಕರಿಸಬೇಕು ಮತ್ತು ಉತ್ಪಾದನಾ ಪ್ರಮಾಣಕ್ಕನುಗುಣವಾಗಿ ಕೇಂದ್ರ ಸರ್ಕಾರವು ಎಥನಾಲ್ ಹಂಚಿಕೆಯನ್ನು ಮಾಡುವುದು.
4. ಹೊಸದಾಗಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಯ ಸಂಬಂಧ ಬರುವ ಪ್ರಸ್ತಾವನೆಗಳಿಗೆ ಹಾಲಿ ಇರುವ ಸಕ್ಕರೆ ಕಾರ್ಖಾನೆಗಳಿಂದ ಕನಿಷ್ಟ 25 ಕಿ.ಮೀ ಅಂತರಕ್ಕೆ ಅವಕಾಶ ಕಲ್ಪಿಸುವುದು.
5. ರಾಜ್ಯ ಸರ್ಕಾರವು ಸಕ್ಕರೆ ಕಾರ್ಖಾನೆಗಳೊಂದಿಗಿನ ವಿದ್ಯುತ್ ಖರೀದಿ ಒಪ್ಪಂದವನ್ನು ನವೀಕರಿಸುವುದು.
6. ವಿದ್ಯುತ್ ಮಾರಾಟದ ಮೇಲೆ ರಾಜ್ಯ ಸರ್ಕಾರವು ಪ್ರತಿ ಯೂನಿಟ್‌ಗೆ ವಿಧಿಸಿರುವ ತೆರಿಗೆಯನ್ನು ಪುನರ್ ಪರಿಶೀಲಿಸುವುದು.
7. ಸಕ್ಕರೆ ಕಾರ್ಖಾನೆಗಳು ನದಿಯಿಂದ ಎತ್ತುವ ನೀರಿನ ತೆರಿಗೆಯನ್ನು ರಾಜ್ಯ ಸರ್ಕಾರವು ಹೆಚ್ಚಿಸಿರುವುದನ್ನು ಪುನರ್ ಪರಿಶೀಲಿಸುವುದು.

ಕಬ್ಬು ಬೆಳೆಗಾರ ರೈತರು ಮತ್ತು ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಸ್ತೃತವಾಗಿ ಚರ್ಚಿಸಿದ ನಂತರ ಕೇಂದ್ರ ಸರ್ಕಾರಕ್ಕೆ ಎಫ್.ಆರ್.ಪಿ ಮಾನದಂಡಗಳ ಪರಿಷ್ಕರಣೆ, ಎಂ.ಎಸ್.ಪಿ ಹೆಚ್ಚಳ, ಎಥನಾಲ್ ಕೋಟಾ ಹೆಚ್ಚಳ ಸೇರಿದಂತೆ ಕೆಲವೊಂದು ಬೇಡಿಕೆಗಳ ಬಗ್ಗೆ ರಾಜ್ಯ ಸರ್ಕಾರದಿಂದ ಪತ್ರ ಬರೆಯಲಾಗಿರುತ್ತದೆ. ಇದಲ್ಲದೇ ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ:ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ, 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿಯ ಕ್ರಮವಾಗಿ ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

| ಇಳುವರಿ | ಎಫ್.ಆರ್.ಪಿ (ಪ್ರತಿ ಮೆ.ಟನ್) (ಕಬ್ಬು ಕಟಾವು ಮತ್ತು ಸಾಗಾಣಿಕ ವೆಚ್ಚವನ್ನು ಒಳಗೊಂಡಂತೆ) (ರೂ.ಗಳಲ್ಲಿ) | ಸಕ್ಕರೆ ಕಾರ್ಖಾನೆಗಳು ಮೊದಲಿನ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ ) | ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ) | | | ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ) |
|---|---|---|---|---|---|---|
| | | | ಸಕ್ಕರೆ ಕಾರ್ಖಾನೆಗಳು | ರಾಜ್ಯ ಸರ್ಕಾರ | ಒಟ್ಟು | |
| 1 | 2 | 3 | 4 | 5 | 6 | 7 (3+6) |
| 9.5% ಅಥವಾ ಕಡಿಮೆ | 3290.5 | ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ | 50 | 50 | 100 | ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ |
| 10.25% | 3550 | 3100 | 50 | 50 | 100 | 3200.00 |
| 11.25% | 3896 | 3200 | 50 | 50 | 100 | 3300.00 |

| | | |
|---|---|---|
| | | 10.25 - 9.5 % ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.<br>* 11.25 - 10.25 % ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.<br><br>ಸದರಿ ಆದೇಶದಲ್ಲಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿಯಾಗಿ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ಪಾವತಿಸಬೇಕೆಂದು ಹಾಗೂ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ಬೆಲೆಯನ್ನು ಹೀಗೆ ಒಟ್ಟು ರೂ.100/-ಗಳನ್ನು ಪ್ರತಿ ಮೆ.ಟನ್ ಒಂದಕ್ಕೆ ಹೆಚ್ಚುವರಿ ಕಬ್ಬಿನ ಬಿಲ್ಲನ್ನು ಘೋಷಿಸಲಾಗಿದೆ.<br><br>ಕಬ್ಬಿಗೆ ಏಕರೂಪ ದರ ನಿಗದಿಪಡಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆಯಾಯ ಸಕ್ಕರೆ ಕಾರ್ಖಾನೆಗಳು ಪಡೆಯುವ ಸರಾಸರಿ ಇಳುವರಿಯನ್ನಾಧರಿಸಿ ಕಬ್ಬಿಗೆ ದರ ನಿಗದಿಪಡಿಸಲಾಗುತ್ತದೆ. ಸರ್ಕಾರದ ಆದೇಶವನ್ನು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಪಾಲಿಸಲು ಸೂಚಿಸಲಾಗಿದೆ. |

**ಸಂಖ್ಯೆ:** ಸಿಐ 370 ಎಸ್‌ಜಿಎಫ್ 2025

**(ಶಿವಾನಂದ ಎಸ್ ಪಾಟೀಲ್)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು